Indian Journal of History and Archaeology

ISSN (E):2582-225X
VOL-1 ISSUE- 6, MARCH-APRIL, 2020, 52-60

# ಶಾಸನಗಳ ಹಿನ್ನಲೆಯಲ್ಲಿ ಮೈಸೂರು ಒಡೆಯರ ಕಾಲದ ಸಾಂಸ್ಕೃತಿಕ ಇತಿಹಾಸ

**ಡಾ. ರವೀಂದ್ರ. ಜೆ.ಸಿ.**

**ಡಾ. ರವೀಂದ್ರ. ಜೆ.ಸಿ**
ಅತಿಥಿ ಉಪನ್ಯಾಸಕರು
ಇತಿಹಾಸ ಅಧ್ಯಯನ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ
ಕಾಲೇಜು, ಮೈಸೂರು

ಪ್ರಾಚೀನ ಕಾಲದಿಂದಲೂ ಹಲವು ಮನೆತನಗಳು ರಾಜಪ್ರಭುತ್ವದ ಆಳ್ವಿಕೆ ಮತ್ತು ಆಡಳಿತ ನಡೆಸಿದ್ದ ಬಗ್ಗೆ ಚರಿತ್ರಾ ಪುಟಗಳಲ್ಲಿ ದಾಖಲಾಗಿವೆ. ದೊಡ್ಡ ದೊಡ್ಡ ಸಾಮ್ರಾಜ್ಯಗಳಿಂದ ಸಣ್ಣ ಸಣ್ಣ ಪಾಳೇಪ್ರಭುತ್ವದವರೆಗೂ ವಿವಿಧ ಪ್ರಾಂತ್ಯಗಳಲ್ಲಿ ಆಳ್ವಿಕೆ ನಡೆಸುವ ಮೂಲಕ ತನ್ನದೇ ಆದ ಕೊಡುಗೆಗಳನ್ನು ನೀಡುವುದರೊಂದಿಗೆ ವಿಶೇಷವಾಗಿ ಗುರುತಿಸಲ್ಪಟ್ಟಿವೆ. ಅದರಲ್ಲೂ ದಕ್ಷಿಣ ಭಾರತದ ಕರುನಾಡ ಸೀಮೆಯಲ್ಲಿ ಆರಂಭಿಕೆಯ ಕದಂಬ ವಂಶದಿಂದ, ಮೈಸೂರು ಒಡೆಯರ ಆಳ್ವಿಕೆಯವರೆಗೂ ಸಾಮ್ರಾಜ್ಯಗಳು ತಲೆಯೆತ್ತುವ ಮೂಲಕ ಕರ್ನಾಟಕದ ಸಾರ್ವಭೌಮತ್ವವನ್ನು ವಿಶ್ವದೆಲ್ಲಡೆ ಪ್ರಸರಿಸಿದ ಕೀರ್ತಿ ಈ ನಾಡಿಗೆ ಸಲ್ಲುತ್ತದೆ. ಈ ಸೀಮೆಯ ಐತಿಹಾಸಿಕ ಹಿನ್ನಲೆಯನ್ನು ಕುರಿತು ಇತಿಹಾಸಕಾರರು ವಿಭಿನ್ನ ನಿಲುವಿನೊಂದಿಗೆ ವೈಜ್ಞಾನಿಕ ದೃಷ್ಠಿಕೋನದಲ್ಲಿ ವಿಶ್ಲೇಷಿಸುವ ಮೂಲಕ ಸಾಮ್ರಾಜ್ಯಗಳ ಆಡಳಿತದ ಕಾಲವನ್ನು ತೆರೆದಿಟ್ಟಿದ್ದಾರೆ.

ವೈಜ್ಞಾನಿಕ ಚರಿತ್ರೆಯ ಅಧ್ಯಯನವೆಂದರೆ ಕಟ್ಟು ಕಥೆಗಳ ಬದಲಾಗಿ ದಾಖಲೆಯ ಸಮೇತ ವಾಸ್ತವಿಕ ಅಧ್ಯಯನ ಎಂದರ್ಥ. ಸಾಮಾನ್ಯವಾಗಿ ವಿಶ್ಲೇಷಕರು, ದಾರ್ಶನಿಕರು, ವಿದ್ವಾಂಸರು, ಚರಿತ್ರಾಕಾರರು ರಾಜಮನೆತನಗಳ ಹಿನ್ನಲೆಯನ್ನು ನೋಡುವುದು ವೈಜ್ಞಾನಿಕ ನೆಲೆಗಟ್ಟಿನ ಪ್ರಾಕ್ತನಾಶಾಸ್ತ್ರದ ಆಧಾರದ ಮೇಲೆ. ಅಂದರೆ ಉತ್ಖನನಗಳು, ಸ್ಮಾರಕಗಳು, ಶಾಸನಗಳು, ನಾಣ್ಯಶಾಸ್ತ್ರಗಳು ಇವು ಹೆಚ್ಚು ನಿಕರತೆ ಮತ್ತು ಸ್ಪಷ್ಟನಿಲುವುಗಳನ್ನು ವಿವರಿಸುವುದರಿಂದ ಕಾಲಗಣನಾಶಾಸ್ತ್ರದ ಆಧಾರದ ಮೇಲೆ ಶಾಸನಗಳ ಅಧ್ಯಯನವನ್ನು ನಡೆಸಬಹುದು. ಅದರಂತೆ ಮೈಸೂರು ಒಡೆಯರ ಆಳ್ವಿಕೆ ಮತ್ತು ಆಡಳಿತದ ವೈಖರಿಯನ್ನು ಅಭ್ಯಸಿಸಲು ಶಾಸನಗಳು

ಮಹತ್ವಪೂರ್ಣವಾದ್ದರಿಂದ ಒಡೆಯರ ಕಾಲದ ಶಾಸನಗಳ ಕಾಲ, ಶಾಸನಗಳ ಕರ್ತೃ, ಶಾಸನಗಳ ವಸ್ತುವಿಷಯಗಳ ಹಿನ್ನಲೆಯಲ್ಲಿ ಲೇಖನಮಾಲೆಯನ್ನು ಹೊರತರಲಾಗಿದೆ.

**ಮೈಸೂರು ಒಡೆಯರ ಕಾಲದ ಶಾಸನಗಳು:**

ಶಾಸನಗಳೆಂದರೆ ಐತಿಹಾಸಿಕ ನೈಜ್ಯ ಸಾಮಾಗ್ರಿಗಳಾಗಿದ್ದು ನಮ್ಮ ಪೂರ್ವಿಕರು ಬಾಳ-ಬದುಕಿದ ರೀತಿ-ನೀತಿಗಳನ್ನು ಕನ್ನಡಿಯಂತೆ ಪ್ರತಿನಿಧಿಸುವ ಚಾರಿತ್ರಿಕ ದಾಖಲೆಯಾಗಿದೆ. ಕ್ರಿ.ಶ 1399 ರಿಂದ ಕ್ರಿ.ಶ 1947 ರವರೆಗೆ ಸುಮಾರು 548 ವರ್ಷಗಳ ಕಾಲ ಮೈಸೂರನ್ನು ಒಡೆಯರ ವಂಶಸ್ಥರು ಆಳ್ವಿಕೆ ನಡೆಸಿದ್ದಾರೆ. ಇವರ ಆಡಳಿತದ ಕಾಲವನ್ನು ಬಗೆದಷ್ಟು ಹೊಸ ಹೊಸ ವಿಚಾರಗಳು, ಕಥೆಗಳು, ಹೊಸ ಹೊಸ ಐತಿಹ್ಯಗಳು, ಗೋಚರಿಸಲ್ಪಟ್ಟಿವೆ. ಇತಿಹಾಸಕಾರರಾದ ರೆವೆರೆಂಡ್ ಹೆರಾಸ್ ಹೇಳುವಂತೆ " ತೀರಾ ಗೋಜಲು ಗೋಜಲಾದ ಪ್ರಾಂತೀಯ ಸಂಘರ್ಷ" ಎಂದರೆ, ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ರವರು "ಗುಡ್ಡಗಾಡಿನ ಪಾಳೇಯಗಾರರ ಕಾಳಗಗಳ ಕಥೆ " ಎಂದಿದ್ದಾರೆ. ಅಂದರೆ ಮೈಸೂರು ವಂಶಸ್ಥರ ಆಳ್ವಿಕೆಯ ಬಗ್ಗೆ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ ಎಂದರ್ಥವಾಗುತ್ತದೆ.[1] ಆದರೆ ಶಾಸನಗಳಲ್ಲಿ ಈ ಸಾಮ್ರಾಜ್ಯದ ವಾಸ್ತವಾಂಶಗಳನ್ನು ಆದಷ್ಟು ನಿಕರವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಇವರ ಕಾಲದ ಶಾಸನಗಳು ಕನ್ನಡ ಮತ್ತು ಸಂಸ್ಕೃತದಲ್ಲಿ ಹೆಚ್ಚಾಗಿರುವುದರಿಂದ ಮತ್ತು ಸರಳವಾದ ಭಾಷಾ ಶೈಲಿಯನ್ನು ಹೊಂದಿರುವುದರಿಂದ ಈ ಮನೆತನಕ್ಕೆ ಸಂಬಂಧಿಸಿದಂತೆ 'ಎಫಿಗ್ರಾಫಿಯಾ ಕರ್ನಾಟಿಕ', ಡಾ.ಹೆಚ್.ಎಂ ಕೃಷ್ಣರವರ 'ಸೆಪ್ಲಿಮೆಂಟರಿ ಶಾಸನಗಳು' ಬಿ.ಎಲ್.ರೈಸ್ ರವರ 'ಮೈಸೂರು ಮತ್ತು ಕೂರ್ಗ್' ಮುಂತಾದ ಶಾಸನಗಳು ಮೈಸೂರು ಒಡೆಯರ ಆಡಳಿತವನ್ನು ಅರಿಯಲು ಸಹಕಾರಿಯಾಗಿವೆ.

ಯದುರಾಯರಿಂದ ಆರಂಭವಾದ ಮೈಸೂರು ಸಂಸ್ಥಾನದ ಅಸ್ಥಿತ್ವ ಕ್ರಿ.ಶ 1610 ರಲ್ಲಿ 9ನೇಯ ಯದುವಂಶದ ದೊರೆ ರಾಜ ಒಡೆಯರ್ ವಿಜಯನಗರ ಅರಸರ ಸಾಮಂತ ಪ್ರಭುತ್ವದಿಂದ ಸ್ವತಂತ್ರ್ಯಗೊಂಡು ಮೈಸೂರು ಸಂಸ್ಥಾನವನ್ನು ಕಟ್ಟಿ ಬೆಳೆಸಿದರು ಎಂದು ತಿಳಿದುಬರುತ್ತದೆ.[2] ರಾಜ ಒಡೆಯರ್ ಪಟ್ಟಾಭಿಷೇಕದ ಕಾಲದ ವೇಳೆ 33 ಹಳ್ಳಿಗಳಿಂದ ಕೂಡಿದ ಒಂದು ಸಣ್ಣ ಪಾಳೇಗಾರರ ಪ್ರಾಂತ್ಯವಾಗಿದ್ದ ಮೈಸೂರು, ಕೇವಲ 300 ಮಂದಿ ಸೈನಿಕರನ್ನು ಒಳಗೊಂಡಿದ್ದ ಒಂದು ಚಿಕ್ಕ ಪ್ರಾಂತ್ಯ. ನಂತರದ ದಿನಗಳಲ್ಲಿ ಬಲಿಷ್ಠ ಅರಸರ ಪ್ರಭಾವದಿಂದ ವಿಸ್ತಾರರೂಪವನ್ನು ಪಡೆದುಕೊಂಡಿತ್ತು.[3]

ಶಾಸನಗಳ ಹಿನ್ನಲೆಯಲ್ಲಿ ಯದುವಂಶದ ಚರಿತ್ರೆಯನ್ನು ನೋಡುವಾಗ ಸರಳ ಹಾಗೂ ನೇರ ರಚನಾ ವಿಧಾನವನ್ನು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ರಚಿಸಿರುವುದರಿಂದ ಶಾಸನಶಾಸ್ತ್ರಜ್ಞರು

ಮೈಸೂರು ಒಡೆಯರ ಕಾಲವನ್ನು 'ಅಂತಿಮ ಘಟ್ಟ'ವೆಂದು ಕರೆಯುತ್ತಾರೆ.[4] ಏಕೆಂದರೆ ಬೇರೆ ಬೇರೆ ಸಾಮ್ರಾಜ್ಯದ ಆಳ್ವಿಕೆಯ ಕಾಲಘಟ್ಟದಲ್ಲಿ ಉಪಯೋಗಿಸಿದ ಭಾಷಾಶೈಲಿಗಿಂತ ಇಲ್ಲಿ ಲಿಪಿಯ ಭಾಷೆ, ಲಿಪಿಯ ವಿಧಾನ, ಬಳಸಿದ ಉಪಕರಣಗಳು ಭಿನ್ನವಾಗಿದ್ದು ಮತ್ತು ಕ್ಲಿಷ್ಟತೆ ಇಲ್ಲದಿರುವುದರಿಂದ ಒಡೆಯರ ಕಾಲದ ಶಾಸನಗಳು ಆಧುನಿಕ ಬರವಣಿಗೆಯ ಶೈಲಿಗೆ ಹತ್ತಿರವಾಗುತ್ತವೆ. ತಾಮ್ರ ಶಾಸನಗಳನ್ನು ಹೊರತುಪಡಿಸಿ ಇತರ ಲೋಹ ವಸ್ತುಗಳ ಮೇಲಿನ ಶಾಸನಗಳು, ಶಿಲಾಶಾಸನಗಳು ಸನ್ನದು ಅಥವಾ ನಿರೂಪ ಇಲ್ಲವೇ ಶಾಸನದ ನಕಲುಗಳು ಮತ್ತು ಗಚ್ಚಿನ ಮೂರ್ತಿಗಳ ಮೇಲಿನ ಶಾಸನಗಳು ಒಡೆಯರ ಕಾಲದ ವೈಶಿಷ್ಠಗಳಾಗಿವೆ.[5]

ಮೈಸೂರು ಒಡೆಯರ ಶಾಸನಗಳಲ್ಲಿ ದಾಖಲಿಸಿರುವ ಘಟಕಗಳೆಂದರೆ ಅಗ್ರಹಾರ, ದೇವಾಲಯ, ಕೆರೆ–ಬಾವಿ, ಕಲ್ಯಾಣಿ, ಛತ್ರ, ಕೋಟೆ, ಮಂಟಪ, ಮಠ, ಪ್ರತಿಮೆ, ದೇವಾಲಯಗಳ ಜೀರ್ಣೋದ್ಧಾರ, ದೇವರ ಪೂಜಾದಿ ಸೇವೆ, ಅನ್ನ ಸಂತರ್ಪಣೆಗೆ ದಾನ, ವ್ಯಕ್ತಿಗಳಿಗೆ ಭೂದಾನ, ದೇವತಾ ವಾಹನಗಳ ಪೂಜಾ ಸಾಮಾಗ್ರಿ, ಅಲಂಕಾರ ವಸ್ತುಗಳ ದಾನ, ಮಹಾರಾಜರ ಕುಟುಂಬದವರ ಮೂರ್ತಿಗಳ ಪ್ರತಿಷ್ಠಾಪನೆ, ಸೇತುವೆ, ರಸ್ತೆ, ರಥಗಳು, ಭೂವಿಕ್ರಯ ಇತ್ಯಾದಿಗಳಲ್ಲಿ ತಮ್ಮ ಆದೇಶವನ್ನು ನಿರೂಪಿಸುವ ಮೂಲಕ ಆಜ್ಞಾನು ಶಾಸನಗಳನ್ನು ಹೊರಡಿಸಿದ್ದಾರೆ. ಮೈಸೂರು ರಾಜರ ಮೊದಲ ಶಾಸನ ಕರ್ತೃ ರಾಜ ಒಡೆಯರ್‌ರವರು. ಇವರ ಕಾಲದಲ್ಲಿ ಮೈಸೂರು ಪ್ರಾಂತ್ಯವು ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ, ಮತ್ತು ಮಲೆನಾಡು ಪ್ರದೇಶಗಳಾದ ಹಾಸನ, ಕಡೂರು, ಶಿವಮೊಗ್ಗದ ಭಾಗಗಳಲ್ಲಿ ಹಾಗೂ ತಮಿಳುನಾಡು ಪ್ರದೇಶಗಳಲ್ಲಿ ಪ್ರದೇಶಗಳಲ್ಲಿ ಹರಡಿದ್ದರಿಂದ ಮೈಸೂರು ಒಡೆಯರ ಶಾಸನಗಳು ನಮಗೆ ಆ ಪ್ರದೇಶದವರೆಗೂ ದೊರೆಯುತ್ತವೆ.[6]

ಮೈಸೂರು ಒಡೆಯರ ತಾಮ್ರಶಾಸನಗಳು ಬಹುತೇಕ ದಾನ ಶಾಸನಗಳಾಗಿದ್ದು ದೇವತಾ ಸ್ತುತಿಯ ಆರಂಭದೊಂದಿಗೆ ಒಡೆಯರ ವಂಶಾವಳಿಯನ್ನು ವಿವರಿಸುತ್ತವೆ. ದಾನಶಾಸನಗಳು ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಸಂಸ್ಕೃತ ಭಾಷೆಯಲ್ಲಿವೆ. ಆದರೆ ದಾನ ನೀಡಿದ ಸೀಮೆಯನ್ನು ವಿವರಿಸುವಾಗ ಕನ್ನಡ ಭಾಷೆಯಲ್ಲಿ ವಿವರಿಸಲಾಗಿದೆ. ಜೊತೆಗೆ ಗ್ರಾಮ ಮತ್ತು ಸೀಮೆಗಳನ್ನು ದಾನ ಶಾಸನಗಳಲ್ಲಿ ಹಲವು ಹಲಗೆಗಳ ಮೇಲೆ ಸವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ. ಇವರ ಶಿಲಾಶಾಸನಗಳಿಗೆ ಹೋಲಿಸಿದರೆ ಗಾತ್ರದಲ್ಲಿ ದಾನ ಶಾಸನವು ಚಿಕ್ಕದಾಗಿದ್ದು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಮೈಸೂರು ಮಹಾರಾಜರು ಶಿಲಾಶಾಸನಗಳ ನಿರೂಪಣೆಗೆ ಆದ್ಯತೆ

ನೀಡದ ಕಾರಣ ಅವುಗಳ ಸಂಖ್ಯಾ ಪ್ರಮಾಣ ಕಡಿಮೆ ಎಂಬುದಾಗಿ ಅರ್ಥೈಸಿಸಕೊಳ್ಳಬಹುದು. ಶಿಲಾಶಾಸನವೂ ಕೂಡ ಕನ್ನಡ ಲಿಪಿಯನ್ನು ಹೊಂದಿದ್ದು ಸರಳ ಹಾಗೂ ಶುದ್ಧ ಭಾಷಾ ಶೈಲಿಯಲ್ಲಿವೆ.

ಮಹಾರಾಜರ ಶಾಸನಗಳು ಸಾಮಾನ್ಯವಾಗಿ ಮಂಗಳ ಶ್ಲೋಕ ಅಥವಾ ಸ್ವಸ್ತಿಯಿಂದ ಆರಂಭವಾಗುತ್ತದೆ. ಗಣಪತಿ, ಶಿವ, ವಿಷ್ಣು, ವರಾಹ, ಇಂದಿರಾ, ದೇವಿ ಹಾಗೂ ಜೈನ ಸ್ತುತಿಗಳಿಂದಲೂ ಕೆಲವೊಂದು ಶಾಸನಗಳು ಪ್ರಾರಂಭವಾಗುತ್ತವೆ.

ಒಡೆಯರ ಕಾಲದ ಶಾಸನಗಳಲ್ಲಿ ಮೇಲಿಂದ ಮೇಲೆ ಬರುವ ಶ್ಲೋಕಗಳೆಂದರೆ ಅದು ಬಾಣನ 'ಹರ್ಷಚರಿತ್ರೆ'ಯ ಮಂಗಳಶ್ಲೋಕ

**ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರ ಚಾರವೇಖ**
**ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭುವೇಖಖ**

ಅಂದರೆ ತಲೆಯ ಮೇಲೆ ಸುಂದರ ಚಂದ್ರನನ್ನು ಚಾಮರದಂತೆ ಧರಿಸಿದ ಮತ್ತು ತ್ರೈಲೋಕ್ಯನಗರದ ಆಧಾರಸ್ತಂಭವಾದ ಶಂಭುವಿಗೆ ನಮಸ್ಕಾರವೆಂಬ ಸಾರಾಂಶವನ್ನು ಈ ಶ್ಲೋಕ ವಿವರಿಸುತ್ತದೆ.[7]

ಕ್ರಿ.ಶ.1639ರಲ್ಲಿ ಆಳುತ್ತಿದ್ದ ಕಂಠೀರವ ನರಸರಾಜ ಒಡೆಯರ ಕಾಲದ ಶಾಸನವೊಂದು ಆತನ ತಂದೆ ಬೆಟ್ಟದ ಚಾಮರಾಜ ಒಡೆಯರನ್ನು ಬಣ್ಣಿಸುವುದು ಹೀಗೆ 'ಶೌರ್ಯದಲ್ಲಿ ಆತ ಸವ್ಯಸಾಚಿ: ಧೃತಿಯಲ್ಲಿ ಹಿಮಗಿರಿ: ಧರ್ಮದಲ್ಲಿ ಧರ್ಮರಾಯ ಮತ್ತು ಉದಾರತೆಯಲ್ಲಿ ಕರ್ಣ, ಕಲ್ಪವೃಕ್ಷ, ಕಾಮಧೇನು ಹಾಗೂ ಚಿಂತಾಮಣಿ ಎಂಬುದಾಗಿ ವಿವರಿಸುತ್ತಾ ಚಾಮರಾಜ ಒಡೆಯರ ಶೌರ್ಯ ಪ್ರತಾಪವನ್ನು ಶಾಸನದಲ್ಲಿ ತಿಳಿಸುತ್ತದೆ. ಬೆಟ್ಟದ ಚಾಮರಾಜ ಒಡೆಯರ್ 'ಪ್ರತಾಪಸಂತಾಪಿತ ವೈರಿರಾಜ' ದೊಡ್ಡ ದೇವರಾಜ ಶುಚಿ, ಸುಶೀಲ, ಸುಕೃತೀ, ಕೃತಜ್ಞ, ಧೃಡವ್ರತ, ಧಾನಪರ, ದಯಾಳು ಹಾಗೂ ಪ್ರಿತಾಪವಾನ್ ಎನಿಸಿದ್ದ. ಆತನ ಸಹೋದರ ಚಿಕ್ಕದೇವರಾಜ ಒಡೆಯರ್ ಲಕ್ಷಣನಂತಿದ್ದ. 'ಮನಸಾವಚಸಾವಪ್ರಿಷಾತಮುಪಾಸ್ತೇ ಭ್ರಾತರಂ ಜ್ಯೇಷ್ಠ' ಎಂದು ತಿಳಿದುಬಂದಿದ್ದರಿಂದ ಇವರು ಸ್ವಂತ ಕವಿಯೂ, ಮತ್ತು ಕವಿಪೋಷಕರು ಆಗಿದ್ದರಿಂದ ಶೂರರೂ, ಸರ್ವಕಲಾಧರರೂ, ಉಪೇಂದ್ರನಂತೆ ಖ್ಯಾತರೂ, ದುಷ್ಟನಿಗ್ರಹ, ಶಿಷ್ಟಾನುಗ್ರಹನಿರತರೂ ಆಗಿದ್ದರಂತೆ. ಈ ದೊರೆಯ ಸೊಗಸಾದ ವರ್ಣನೆಗಳನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಕ್ರಿ.ಶ. 1644ರ ನಂಜನಗೂಡಿನ 14ನೇ ಶಾಸನವು ನಂದಿಯ ವಿಗ್ರಹದ ಪೀಠದ ಮೇಲಿದ್ದು ಚಾಮರಾಜ ಒಡೆಯರಿಗೆ ಮಗನಂತೆ ಸಮಾನನಾದ ದಳವಾಯಿಗೆ 'ವಿಕ್ರಮರಾಯನ ಸೇವೆ' ಎಂದು ಉಲ್ಲೇಖಿಸಿರುವುದು ಶಾಸನದಲ್ಲಿ ಕಂಡುಬರುತ್ತದೆ.[8] ಅಂದರೆ ಮಹಾರಾಜರು ದಳವಾಯಿಗಳನ್ನು ತನ್ನ ಮಕ್ಕಳಂತೆ ಗೌರವಪೂರ್ವಕವಾಗಿ ನೋಡಿಕೊಳ್ಳುತ್ತಿದ್ದರು.

ಕ್ರಿ.ಶ. 1663ರ ನಂಜನಗೂಡಿನ ತಾಮ್ರಶಾಸನವು ಚಿಕ್ಕದೇವರಾಜ ಒಡೆಯರ ಕಾಲಕ್ಕೆ ಸೇರಿದ ಶಾಸನವಾಗಿದ್ದು, ರಾಘವೇಂದ್ರಸ್ವಾಮಿ ಮಠದ, ರಾಘವೇಂದ್ರ ತೀರ್ಥಶ್ರೀಪಾದರಿಗೆ ಕೊಟ್ಟ ದತ್ತಿಯನ್ನು ವಿವರಿಸುತ್ತದೆ.[9]

ಕ್ರಿ.ಶ 1670ರ ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಮತ್ತೋರ್ವ ಪ್ರಸಿದ್ಧ ದಾರ್ಶನಿಕ ಮತ್ತು ಸಂಸ್ಕೃತ ಕವಿ ದಂಡಿಯ 'ಕಾವ್ಯದರ್ಶನ'ದಲ್ಲಿರುವ ಶ್ಲೋಕವನ್ನು ಬರೆಸಲಾಗಿದೆ.

**ಚತುರ್ಮುಖ ಮುಖಾಂಭೋಜವನಹಂಸವಧೂರ್ಮಮಖ**
**ಮಾನಸೇರ ಮತಾಂ ನಿತ್ಯಂ ಸರ್ವಶುಕ್ಲಾಸರಸ್ವತೀಖಖ**

ಈ ಶಾಸನದಲ್ಲೂ ಶಿವ ಪಾರ್ವತಿಯರಂತೆ ಗಣಪತಿಯನ್ನು ಶಾಸನದ ಶ್ಲೋಕಗಳಲ್ಲಿ ಕಾಣಬಹುದು. ತಾಯಿ ಅಗಜೆಯ ಮುಖಾರವಿಂದವನ್ನು ಅರಳಿಸುವ ಸೂರ್ಯನಂತಿರುವ, ಭಕ್ತರಿಗೆ ಅನೇಕ ಬೇಡಿದ ವರಹಗಳನ್ನು ಕರುಣಿಸುವ ಏಕದಂತನನ್ನು ಹಗಳಿರುಳು ಧ್ಯಾನಿಸುತ್ತೇನೆ ಎಂಬ ಶ್ಲೋಕ ತಿಳಿಸಿದೆ.[10]

ಮತ್ತೊಂದು ಶಾಸನದ ಶ್ಲೋಕದಲ್ಲಿ ತಿಳಿಸಿರುವಂತೆ

**ಹರೇರ್ಲೀಲಾವರಾಹಸ್ಯ ದುಷ್ಟ್ರಾದಂಡಸ್ಯಪಾತುವಃಖ**
**ಹೇಮಾದ್ರಿ ಕಲಶಾ ಯತ್ರ ಧಾತ್ರೀಛತ್ರಶ್ರಿಯಂ ದಧೌಖಖ**

ದೇವತಾ ಸ್ತುತಿಗಳಲ್ಲಿ ಹಾಗೂ ತಾಮ್ರಶಾಸನಗಳಲ್ಲಿ ದತ್ತಾತ್ರೇಯನು ಮೈಸೂರಿನ ದೊರೆ ದೇವರಾಜನನ್ನು ರಕ್ಷಿಸಲೆಂದು ಪ್ರಾರ್ಥಿಸುವ ಈ ಶ್ಲೋಕದ ಪದ್ಯ ವಿಶಿಷ್ಠವಾಗಿದ್ದು ಇದನ್ನು ಸರಳವಾಗಿ ರಚಿಸಲ್ಪಟ್ಟಿದೆ. [11]

ಕ್ರಿ.ಶ 1674ರ ಶಾಸನವು ಚಿಕ್ಕದೇವರಾಜ ಒಡೆಯರು ದಾದೋಜಿ, ಜೈತಜಿ, ಶಂಭು, ಕುತುಪಷಾಹ, ಮತ್ತು ಬಸವರನ್ನು ಸೋಲಿಸಿದನ್ನು ವಿವರಿಸಿದೆ. ಈ ಶಾಸನದಲ್ಲಿರುವಂತೆ ರಾಜನು ಬಹು ಹಿಂದೆಯೇ ಬಹಳ ಜನರಿಂದ ಭುಕ್ತವಾದ ಭೂಮಿಯನ್ನು ಬಲಿಚಕ್ರವರ್ತಿಯು ವಿಷ್ಣುವಿಗೆ ಕೊಟ್ಟುಬಿಟ್ಟನು, ನಾರಾಯಣನು ಸರಸ್ವತಿಯನ್ನು ಬ್ರಹ್ಮನಿಗೆ ನೀಡಿದನು, ಸೂರ್ಯನು ತನ್ನ ಕಿರಣ ಸಮುದಾಯವನ್ನು ಅಗ್ನಿ ಅಥವಾ ಚಂದ್ರನಿಗೆ ಕೊಟ್ಟುಬಿಟ್ಟನು, ಹಾಗೆಯೇ ಚಿಕ್ಕದೇವರಾಜನು ಸಜ್ಜನರಿಗೆ ಸದಾ ಹಸುಗಳನ್ನು ನೀಡಿದನು. ಈ ದೊರೆಯ ಆಡಳಿತದಲ್ಲಿ ಪ್ರಸಿದ್ಧ ಪೃಥುವನ್ನು ಕುರಿತ ಪ್ರಶಂಸೆಯ ಮಾತು ಉಪಯುಕ್ತವಾಯಿತು. ನಳನ ಹೆಸರು ಬಿದ್ದುಹೋಯಿತು. ರಘುವಿನ ಪರಿಪೂರ್ಣತೆ ಮರೆಯಾಗಿಹೋಯಿತು. ಕಾರ್ತವೀರ್ಯನ ಉಲ್ಲೇಖದಿಂದ ಪ್ರಯೋಜನವೇನು? ಇನ್ನೂ ದಿಲೀಪನ ಕೀರ್ತಿ ಎಲ್ಲಿ ಹೋಯಿತೋ ಏನೋ? ಶ್ರೀರಾಮನು ಖರದೂಷಣಾದಿಗಳನ್ನು ವಧಿಸಿದಂತೆ ಚಿಕ್ಕದೇವರಾಜನು ಮರಾಠರ ದಾದೋಜಿ, ಜೈತ್ಯಾದಿಗಳನ್ನು ಕೊಂದನು. ಸಿಂಹವನ್ನು ಕಂಡ ಜಿಂಕೆಗಳಂತೆ, ಹದ್ದನ್ನು ಕಂಡ ಮೊಲಗಳಂತೆ, ಗರುಡನನ್ನು ಕಂಡ ಹಾವುಗಳಂತೆ, ಚಿಕ್ಕದೇವರಾಜರನ್ನು ಕಂಡ ಶಂಭು, ಬಸವಾದಿ ಶತ್ರು ಪಾಳೇಗಾರರು ಭಯಭೀತರಾದಂತೆ ತೋರಿಸುತ್ತದೆ. ಹಾಗೂ ಇದೇ ಶಾಸನದಲ್ಲಿ ದೊರೆಯನ್ನು 'ಸಮಸ್ತ ನೃಪರತ್ನ ಕಿರೀಟ ನೃತ್ಯದಾಜ್ಞಾಟೀಚಟುಲನಾಟಕಸೂತ್ರಧಾರಃ' ಎಂದು ಉತ್ಪ್ರೇಕ್ಷಿಸುತ್ತದೆ. ಮೈಸೂರು ಒಡೆಯರ ಇತಿಹಾಸದಲ್ಲೇ ಶೌರ್ಯ ಸಾಹಸಕ್ಕೆ ಹೆಸರಾದ ಚಿಕ್ಕದೇವರಾಜ ಒಡೆಯರಿಗೆ ಅಂದು ಸರಿಸಮಾನರಾಗಿ ಎದುರಿಸುವ ಛಲಗಾರರೇ ಇರಲಿಲ್ಲವೇನೋ ಎಂಬಂತೆ ವರ್ಣಿಸಲಾಗಿದೆ. ಮತ್ತು ಇವರ ಕಾಲವೂ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನೇ ಬರೆಯಲ್ಪಟ್ಟಿತು. ಹಾಗಾಗೀ ಎಂದಿಗೂ ಮರೆಯಲಾಗದ ರಾಜ ದೊರೆ ಚಿಕ್ಕದೇವರಾಜ ಒಡೆಯರ್ ಎಂದು ಪ್ರಶಂಸಿಸಲಾಗಿದೆ.[12]

ಕ್ರಿ.ಶ. 1723ರ ಶ್ರವಣಬೆಳಗೊಳದ ಶಾಸನದಲ್ಲಿ ಅಪರೂಪವಾಗಿ ಕನ್ನಡದ ಪದ್ಯವೊಂದು ದೊರೆಯುತ್ತದೆ.

**ಜನತಾಧಾರನುದಾರ ಸತ್ಯದಯಂ ಸತ್ಕೀರ್ತಿಕಾಂತಾಜಯಂಖ**
**ವಿನಯಂ ಧರ್ಮ್ಮಸದಾಶ್ರಯಂ ಸುಖಚಯಂ ತೇಜಪ್ರತಾಪೋದಯಂಖಖ**
**ಜನನಾಥಂ ವರಕೃಷ್ಣಭೂವರಲಸತ್ ಪ್ರಖ್ಯಾತ ಚಂದ್ರೋದಯಂಖ**
**ಘನಪುಣ್ಯಾನ್ವಿತ ಕ್ಷತ್ರಿಯಾಣ್ಮಂ ಪಡೆದಂ ಸಧರ್ಮ್ಮಸಂಪತ್ತಿಯಂಖಖ**

ಈ ಶಾಸನ ಒಂದನೇ ಕೃಷ್ಣರಾಜ ಒಡೆಯರ ಬಣ್ಣನೆಯಾಗಿದ್ದು ವಸುಮತಿಯು ಇಮ್ಮಡಿ ಕೃಷ್ಣರಾಜ ಒಡೆಯರ ಭುಜಗಳನ್ನು ಆಶ್ರಯಿಸಿದ ಮೇಲೆ ದಿಗ್ಗಂತಿಗಳನ್ನಾಗಲೀ, ಬೆಟ್ಟಗಳನ್ನಾಗಲೀ, ಶೇಷಗಳನ್ನಾಗಲೀ, ಕೂರ್ಮವನ್ನಾಗಲೀ, ಇತರ ಅರಸರ ಭುಜಗಳನ್ನಾಗಲೀ ಬಯಸಿಲ್ಲವಂತೆ. ಈ ದೊರೆಯ ಕಡೆಗಣ್ಣ ನೋಟದಲ್ಲಿ ಲಕ್ಷ್ಮೀ ನೆಲೆಸಿದಳಂತೆ, ಸರಸ್ವತಿಯ ಆವಾಸ ಈತನ ಬಾಯಿ, ಹೃದಯವಾದರೋ ರಂಗವಿಭುವಿಗೆ ಮೀಸಲು, ಈತನ ಭುಜದ ಮೇಲೆ ಧರೆಯು ವಿಶ್ರಾಂತಿ ಪಡೆದಳು. ಉದಾರತೆ ಈತನ ಕರಗಳಲ್ಲಿ, ಇತರ ರಾಜರ ಕಿರೀಟದ ಕಾಂತಿ ಬೀಳತ್ತಿದ್ದುದ್ದು, ಈತನ ಪಾದಗಳ ಮೇಲೆ ಆಶ್ರಿತರ ಮನೆ, ಸಂಪತ್ತಿನ ನೆಲೆಯಾಗಿದ್ದರಿಂದ ದೊರೆಯ ಕೀರ್ತಿ ಮೂರು ಲೋಕಗಳಲ್ಲೂ ಹಬ್ಬಿತ್ತು. 'ಚಪ್ಪಂನ ದೇಶಾಧಿಪರಿಂ ಕಪ್ಪವಕೊಂಡು ಮೂವತ್ತೆರಡು ಧರ್ಮದೊಳ್ ವಿಖ್ಯಾತಿಯಂ ಪಡೆದು ಮೆರೆಯುವ' ಈ ದೊರೆಯು ಕ್ಷಮೆಯಲ್ಲಿ ಧರ್ಮರಾಯ, ಶಕ್ತಿಯಲ್ಲಿ ಭೀಮ, ಶಸ್ತ್ರದಲ್ಲಿ ಅರ್ಜುನ, ತುರುಗಕ್ಕೆ ನಕುಲ, ತಿಳಿವಳಿಕೆಗೆ ಸಹದೇವ, ಸತ್ಯಕ್ಕೆ ಹರಿಶ್ಚಂದ್ರ, ಚೆಲುವಿಗೆ ಮನ್ಮಥ ಎಂದು ಮುಂತಾದ ಖ್ಯಾತಿಹೊಂದಿದಂತೆ ಶಾಸನದಲ್ಲಿ ತೋರಿಸುತ್ತದೆ.[13]

ಕ್ರಿ.ಶ 1738ರ ಶಿಲಾಶಾಸನವೊಂದರಲ್ಲಿ ಕಾಳಿದಾಸ ಕವಿಯ ವಿರಚಿತ 'ರಘುವಂಶ'ದ ಮಹಾಕಾವ್ಯದಲ್ಲಿ ಬರುವ ಪದ್ಯವನ್ನು ನಿರೂಪಿಸಲಾಗಿದೆ.

**ವಾಗ್ಗಥಾಯಾವಸಪತೌ ವಾಗ್ಗತ್ತಃ ಪ್ರತಿಪದ್ಯತೆಖ**
**ಜಗತಃ ಪಿತರಂ ವಂದೇ ಪಾರ್ವತೀಪರಮೇಶ್ವರಖಖ**

ಮಹಾರಾಜರು, ಮಾತು ಮತ್ತು ಅರ್ಥಗಳಿಗೆ ಹೊಂದಿಕೊಂಡಂತೆ ಇರುವ ಜಗತ್ತಿಗೆ ತಂದೆ–ತಾಯಿಗಳಾದ ಪಾರ್ವತಿ ಪರಮೇಶ್ವರರಿಗೆ ವಂದಿಸುತ್ತೇನೆ ಎಂಬ ವಿವರ ಶಾಸನದಲ್ಲಿ ಕಂಡುಬಂದಿರುವುದು ಸುತ್ತಾರ್ಹವಾಗಿದೆ.

ಕ್ರಿ.ಶ. 1744ರ ಚಾಮರಾಜನಗರದ 291ನೇಯ ತಾಮ್ರಶಾಸನವು ಮೈಸೂರು ಅರಸ ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಪ್ರಧಾನಿ ವೆಂಕಟಪತಿಯು ಕಾವೇರಿ ಮತ್ತು ಕಪಿಲ ನದಿಯ ದಂಡೆಯಲ್ಲಿ ತಿರುಮಕೂಡಲಿನ ಹಂಪಾಪುರವನ್ನು 'ವೆಂಕಟರಾಮ ಸಮುದ್ರವೆಂಬ' ಹೆಸರಿನಲ್ಲಿ ಅಗ್ರಹಾರವನ್ನಾಗಿ ಮಾಡಿ 12 ಜನ ಬ್ರಾಹ್ಮಣರಿಗೆ ದಾನ ನೀಡಿರುವುದನ್ನು ದಾಖಲಿಸಲಾಗಿದೆ. ಹಾಗೂ ದಾನಭೂಮಿಗಳ ಅಥವಾ ಗ್ರಾಮಗಳ ಗಡಿಗಳನ್ನು ನಿರ್ದೇಶಿಸಿ ವಾಮನ ಮುದ್ರೆ ಕಲ್ಲುಗಳನ್ನು ನೆಟ್ಟು ವಂಶ ಪಾರಂಪರ್ಯವಾಗಿ ಅನುಭವಿಸುವಂತೆ ದಾನ ನೀಡಿದುದನ್ನು ದಾಖಲಿಸಿದೆ.[14]

ಕ್ರಿ.ಶ.1794ರ ರಾಮಚಂದ್ರಪುರದ ತಾಮ್ರಶಾಸನ ಮೈಸೂರು ಒಡೆಯರ ಕಾಲದ ಅತ್ಯಂತ ದೊಡ್ಡ ಶಾಸನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.[15]

ಕ್ರಿ.ಶ.1821ರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಮೈಸೂರು ನಗರದ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಶಾಸನದಂತೆ ಒಡೆಯರ ಪಟ್ಟಾಮಹಿಷಿ ದೇವಾಜಮ್ಮಣ್ಣಿ ಹಾಗೂ ಮತ್ತೀಬ್ಬರ ರಾಣಿಯ ನೆನಪಿಗಾಗಿ ಅವರ ಹೆಸರಿನಲ್ಲಿ ಅಗ್ರಹಾರವನ್ನು ನಿರ್ಮಿಸಿದ ವಿವರವಿದೆ.[16] ಹಾಗೂ ಕ್ರಿ.ಶ. 1829ರ 37ನೇ ಶಿಲಾಶಾಸನದಲ್ಲಿ ಬಣ್ಣಿಸಿದಂತೆ ಮುಮ್ಮಡಿ ಕೃಷ್ಣರಾಜರು ನಗರದ ಕೋಟೆ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನವನ್ನು ನಿರ್ಮಿಸಿದರೆಂದು ಮತ್ತು ಅದಕ್ಕೆ ಕಾಣಿಕೆಯನ್ನು ನೀಡಿದರೆಂದು ಉಲ್ಲೇಖಿಸಲಾಗಿದೆ.[17]

ಶಾಸನಗಳ ಹಿನ್ನಲೆಯಲ್ಲಿ ಮೈಸೂರು ಒಡೆಯರ ಇತಿಹಾಸವನ್ನು ತಿಳಿಯಲು ಹೆಚ್ಚು ಸೂಕ್ತವಾದುದಾಗಿದೆ. ಮೈಸೂರು ಒಡೆಯರ ಸಂತತಿಗೆ ಸಂಬಂಧಿಸಿದಂತೆ ಸುಮಾರು 300ಕ್ಕೂ ಹೆಚ್ಚು ಶಾಸನಗಳು ದೊರೆತರೂ ಚಿಕ್ಕದೇವರಾಜ ಒಡೆಯರ್, ಇಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದ ಶಾಸನಗಳೇ ಅಧಿಕ ಪ್ರಮಾಣದಲ್ಲಿ ದೊರೆಯುತ್ತವೆ. ಮೈಸೂರು ಒಡೆಯರ ಕಾಲದ ಶಾಸನಗಳು ಸಾಮಾನ್ಯವಾಗಿ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಸರಳವಾಗಿ ರಚಿತವಾಗಿರುವುದರಿಂದ ಇಂದಿನ ಶಾಸನಶಾಸ್ತ್ರಜ್ಞರಿಗೆ ಅಧ್ಯಯನ ಮಾಡಲು ಸುಲಭ ಹಾಗೂ ಸಹಕಾರಿಯಾಗಿದೆ. ಮತ್ತು ಎಲ್ಲಾ ಶಾಸನಗಳು ಸಾಮಾನ್ಯವಾಗಿ ದೇವರ ಮಂಗಳ ಸೂತ್ರದೊಂದಿಗೆ ಹಾಗೂ ಶೈವ, ವೈಷ್ಣವ, ಜೈನ ಸ್ತುತಿಗಳು ಸೇರಿದಂತೆ ಆರಂಭವಾಗುತ್ತವೆ. ಒಡೆಯರ ಕಾಲದ ಶ್ಲೋಕವು ನಮಗೆ ತಿಳಿದಂತೆ ಎಲ್ಲಾ ಧರ್ಮದ ಸಮನ್ವಯವನ್ನು ಸಾರುತ್ತಿದ್ದವು ಎಂಬುದಾಗಿ ಬಣ್ಣಿಸಲಾಗಿದೆ. ಹಾಗೆಯೇ ಮುಖ್ಯವಾಹಿನಿಯಲ್ಲಿ ಗುರುತ್ತಿಸಲ್ಪಡುವ ಒಡೆಯರ್‌ಗಳನ್ನು ಬಿಟ್ಟರೆ ಉಳಿದ ರಾಜರುಗಳು ಶಾಸನದ ನಿರೂಪಣೆಯಲ್ಲಿ ಆಸಕ್ತಿ ಇಲ್ಲದಿರುವುದನ್ನು ತೋರಿಸುತ್ತದೆ. ಹಾಗೆಯೇ ದಾನಶಾಸನಗಳಲ್ಲಿ ಕಂಡುಬರುವ ವಿವರದಂತೆ ಹೆಚ್ಚಾಗಿ ಬ್ರಾಹ್ಮಣ ಸಮುದಾಯಗಳಿಗೆ ಆಧ್ಯತೆ ನೀಡಿ ಅವರಿಗೆ ಅಪಾರವಾದ ಉಡುಗೊರೆ, ದಾನಧತ್ತಿ, ಅಗ್ರಹಾರಗಳನ್ನು ನಿರ್ಮಿಸಿ ಅವರನ್ನು ಓಲೈಸಿಕೊಳ್ಳುವ ಮೂಲಕ ಇತರ ಹಿಂದುಳಿದ ವರ್ಗಗಳನ್ನು ಕಡೆಗಣಿಸಿದಂತೆ ಕಾಣುತ್ತದೆ. ಶಾಸನಗಳಲ್ಲಿ ಮಹಾರಾಜರು ಸಮರ್ಥರೋ? ಅಥವಾ ಅಸಮರ್ಥರೋ? ಎಂಬುದಾಗಿ ತಿಳಿಸಿಲ್ಲವಾದ್ದರಿಂದ ಪಕ್ಷಪಾತ ಧೋರಣೆಯು ಗೋಚರಿಸುತ್ತದೆ ಹಾಗೂ ಮಹಾರಾಜರುಗಳನ್ನು ಹೊಗಳಿಕೆಯಲ್ಲಿ ಬಿಂಬಿಸಿದಂತೆ ಕಂಡುಬರುತ್ತದೆ. ಹಾದ್ಯಾಗ್ಯೂ ರಾಜ ಒಡೆಯರ ಕಾಲದಿಂದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದವರೆಗೂ ರಚಿಸಲ್ಪಟ್ಟ

ಶಾಸನಗಳು ಚರಿತ್ರಾಕಾರರನ್ನು ಆಕರ್ಷಿಸುವ ಮೂಲಕ ಶಾಸನಗಳಲ್ಲಿ ಉದುಗಿರುವ ಅಂಶಗಳನ್ನು ಸಂಶೋಧನೆಯ ಮೂಲಕ ಬೆಳಕಿಗೆ ತರಬಹುದೆಂಬ ನೀರೀಕ್ಷೆಯನ್ನು ಲೇಖನದಲ್ಲಿ ತಿಳಸಲಾಗಿದೆ.

**ಪರಾಮರ್ಶನ ಗ್ರಂಥಗಳು**

1. ಪ್ರೊ. ಪಿ.ವಿ.ನಂಜರಾಜ ಅರಸು–ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಪ್ರಕಾಶನ ಮೈಸೂರು, 2011, ಪು–1
2. ಅದೇ, ಪು–366
3. ರಾಮಕೃಷ್ಣರಾವ್.ಬಿ–ಶ್ರೀಮನ್ಮಹಾರಾಜರ ವಂಶಾವಳಿ, ಭಾಗ–1, ಮೈಸೂರು 1916, ಪು–29
4. ಪೂರ್ವೋಕ್ತ, ಪಿ.ವಿ. ನಂಜರಾಜ ಅರಸು, ಪು–5
5. ಡಾ. ಹೆಚ್.ಎನ್. ಕಾಳಸ್ವಾಮಿ– ಮೈಸೂರು ಒಡೆಯರ ಕಾಲದ ಸಾಂಸ್ಕೃತಿಕ ಚಟುವಟಿಕೆಗಳು, ಲೇಖನ 2019, ಪು–3
6. Henry Heras-Aravida dynasty of Vijaya Nagar, Bombay 1927, P-181
7. Epigraphia Carnatica-Vol-5, Revised Edition, Mysore University Mysore 1914, P-291
8. Epigraphia Carnatica-Vol-3, Revised Edition, Mysore University Mysore 1914, P-199
9. Op-cit, Epigraphia Carnatica-Vol-5, P-99
10. ಪೂರ್ವೋಕ್ತ, ಪಿ.ವಿ. ನಂಜರಾಜ ಅರಸು, ಪು–366
11. ಪೂರ್ವೋಕ್ತ, ಡಾ. ಹೆಚ್.ಎನ್. ಕಾಳಸ್ವಾಮಿ, ಪು–5
12. Op-cit, Epigraphia Carnatica-Vol-5, P-100
13. ಪೂರ್ವೋಕ್ತ, ಡಾ. ಹೆಚ್.ಎನ್. ಕಾಳಸ್ವಾಮಿ, ಪು–7
14. Op-cit, Epigraphia Carnatica-Vol-5, P-291
15. Op-cit, Epigraphia Carnatica-Vol-3, P-291
16. ಡಾ. ಆರ್. ಗೋಪಾಲ್–ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು 2010, ಪು–539–540
17. Epigraphia Carnatica-Vol-6, Revised Edition, Mysore University Mysore 1914, P-171